ದಿನಾಂಕ : 13.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿಯ ಪರವಾಗಿ ಶ್ರೀ ಕೆ.ಪಿ. ವಕೀಲರಿಂದ :**

*ನನಗೆ ಕನ್ನಡ ಭಾಷೆಯನ್ನು ಓದಲು ಮತ್ತು ಬರೆಯಲು ಬರುತ್ತದೆ . ನಾನು ಪಿ.ಯು.ಸಿ.ವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಆಂಗ್ಲಭಾಷೆ ಸ್ವಲ್ಪ ಬರುತ್ತದೆ. **1** ನೇ ಪ್ರತಿವಾದಿ ನನ್ನ ಅತ್ತಿಗೆ ಮತ್ತು **2** ನೇ ಪ್ರತಿವಾದಿ ಅವರ ಮಗ ಎಂದರೆ ಸರಿ. ನನ್ನ ತಂದೆ ರಂಗಾರೆಡ್ಡಿ ಮತ್ತು ತಾಯಿ ಪಾಪಮ್ಮ ಎಂದರೆ ಸರಿ . ನನ್ನ ತಂದೆಯವರು ವ್ಯವಸಾಯ ಕುಟುಂಬದವರು ಮತ್ತು ಅವರಿಗೆ ಮೂರು ನಾಲ್ಕು ಊರುಗಳಲ್ಲಿ ಆಸ್ತಿಗಳು ಇವೆ ಎಂದರೆ ಸರಿ . ಅವರಿಗೆ ನಾವು ಒಟ್ಟು ಐದು ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಎಂದರೆ ಸರಿ . ಸದರಿ ಐದು ಗಂಡುಮಕ್ಕಳು ನಾನು , ಆರ್.ವೆಂಕಟರೆಡ್ಡಿ, ಆರ್. ಶ್ರೀನಿವಾಸರೆಡ್ಡಿ , ಆರ್. ನಾರಾಯಣಸ್ವಾಮಿ , ಆರ್. ಪಲ್ಲಾರೆಡ್ಡಿ ಹಾಗೂ ಹೆಣ್ಣು ಮಗಳು ವೆಂಕಟಮ್ಮ ಎಂದರೆ ಸರಿ . ವೆಂಕಟಮ್ಮನವರನ್ನು ನನ್ನ ತಂದೆಯ ಜೀವಿತ ಅವಧಿಯಲ್ಲಿ ಮದುವೆ ಮಾಡಿಕೊಟ್ಟಿದ್ದು ಆಕೆ ಗಂಡನ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ . ನನ್ನ ತಂದೆ ಈಗ ಬದುಕಿರುವುದಿಲ್ಲ. ನನ್ನ ತಂದೆಯ ಜೀವಿತ ಕಾಲದಲ್ಲಿ ಎಲ್ಲಾ ಗಂಡುಮಕ್ಕಳಿಗೆ ಆಸ್ತಿಯನ್ನು ವಿಭಾಗ ಮಾಡಿರುತ್ತಾರೆಂದರೆ ಸರಿ. ಆ ಸಮಯದಲ್ಲಿ ವೆಂಕಟಮ್ಮನ ಮಗ ಗೋವಿಂದರೆಡ್ಡಿಗೂ ಸಹ ಭಾಗ ನೀಡಲಾಯಿತು ಎಂದರೆ ಸರಿ. ಸದರಿ ವಿಭಾಗದಲ್ಲಿ ಸರ್ವೆ ನಂ.**145** ರಲ್ಲಿ **30** ಗುಂಟೆ, ಸರ್ವೆ ನಂ.**227** ರಲ್ಲಿ **4** ಎಕರೆ ಹಾಗೂ ಸರ್ವೆ ನಂ.**230** ರಲ್ಲಿ **1** ಎಕರೆ **10** ಗುಂಟೆ ಆಸ್ತಿ ನನ್ನ ಪಾಲಿಗೆ ಬಂದಿರುತ್ತದೆ ಎಂದರೆ ಸರಿ . ಸರ್ವೆ ನಂ.**227** ರಲ್ಲಿ ಒಟ್ಟು **10** ಎಕರೆ **5** ಗುಂಟೆ ಆಸ್ತಿ ಇದ್ದು ಆ ಪೈಕಿ ನಾಲ್ಕು ಎಕರೆ ಆಸ್ತಿಯನ್ನು ನನಗೆ ನೀಡಲಾಗಿದೆ ಎಂದರೆ ಸರಿ . ಅದೇ ವಿಭಾಗದಲ್ಲಿ ಶ್ರೀನಿವಾಸರೆಡ್ಡಿ*

ಎಂಬುವವರಿಗೆ ಸರ್ವೆ ನಂ.227 ರಲ್ಲಿ 3 ಎಕರೆ 36 ಗುಂಟೆ ಮತ್ತು ಸರ್ವೆ ನಂ.228/1 ರಲ್ಲಿ ಒಂದು ಎಕರೆ 30 ಗುಂಟೆ ಆಸ್ತಿಯನ್ನು ನೀಡಲಾಯಿತು ಎಂದರೆ ನನಗೆ ಗೊತ್ತಿಲ್ಲ . ಅದೇ ರೀತಿ ನನ್ನ ಮತ್ತೊಬ್ಬ ಸಹೋದರ ನಾರಾಯಣಸ್ವಾಮಿಗೆ ಸರ್ವೆ ನಂ.147 ರಲ್ಲಿ 1 ಎಕರೆ 10 ಗುಂಟೆ, ಸರ್ವೆ ನಂ.148 ರಲ್ಲಿ 28 ½ ಗುಂಟೆ ಮತ್ತು ಸರ್ವೆ ನಂ.226 ರಲ್ಲಿ 15 ಗುಂಟೆ ಆಸ್ತಿಯನ್ನು ನೀಡಲಾಯಿತು ಎಂದರೆ ನನಗೆ ಗೊತ್ತಿಲ್ಲ . ಸರ್ವೆ ನಂ.147 ರಲ್ಲಿ ಒಟ್ಟು 2 ಎಕರೆ 20 ಗುಂಟೆ, ಸರ್ವೆ ನಂ.148 ರಲ್ಲಿ 1 ಎಕರೆ 17 ಗುಂಟೆ ಮತ್ತು ಸರ್ವೆ ನಂ.226 ರಲ್ಲಿ 1 ಎಕರೆ 20 ಗುಂಟೆ ಆಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನಾರಾಯಣಸ್ವಾಮಿಗೆ ಸರ್ವೆ ನಂ.227 ರಲ್ಲಿ 2 ಎಕರೆ 9 ಗುಂಟೆ ಆಸ್ತಿಯನ್ನು ನೀಡಿದರು ಎಂದರೆ ನನಗೆ ಗೊತ್ತಿಲ್ಲ . ಅದೇ ರೀತಿ ಸರ್ವೆ ನಂ .228/3 ರಲ್ಲಿ 2 ಎಕರೆ ಆಸ್ತಿಯನ್ನು ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನನ್ನ ಮತ್ತೊಬ್ಬ ಸಹೋದರ ಪಲ್ಲಾರೆಡ್ಡಿಯವರಿಗೆ ಸರ್ವೆ ನಂ.147 ರಲ್ಲಿ 1 ಎಕರೆ 10 ಗುಂಟೆ, ಸರ್ವೆ ನಂ.148 ರಲ್ಲಿ 28 ½ ಗುಂಟೆ, ಸರ್ವೆ ನಂ.225 ರಲ್ಲಿ 2 ಎಕರೆ 32 ಗುಂಟೆ ಮತ್ತು ಸರ್ವೆ ನಂ.228/4 ರಲ್ಲಿ 1 ಎಕರೆ 30 ಗುಂಟೆ ಆಸ್ತಿಯನ್ನು ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ವೆಂಕಟರೆಡ್ಡಿಯವರಿಗೆ ಸದರಿ ವಿಭಾಗದಲ್ಲಿ ಸರ್ವೆ ನಂ .224 ರಲ್ಲಿ 7 ಎಕರೆ 17 ಗುಂಟೆ ಮತ್ತು ಸರ್ವೆ ನಂ .229 ರಲ್ಲಿ 4 ಎಕರೆ 39 ಗುಂಟೆ ಆಸ್ತಿಯನ್ನು ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾವು ಆ ರೀತಿ ವಿಭಾಗವಾದ ನಂತರ ವಿಭಾಗದಂತೆ ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇವೆಂದರೆ ಸರಿ. ಈ ಬಗ್ಗೆ ಹಕ್ಕು ಬದಲಾವಣೆ ವಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು.

*1ನೇ ಪ್ರತಿವಾದಿಯ ಗಂಡ ವೆಂಕಟರೆಡ್ಡಿಯವರು **2013** ರಲ್ಲಿ ಮೃತಪಟ್ಟಿದ್ದಾರೆ. 1ನೇ ಪ್ರತಿವಾದಿಯ ಗಂಡನ ಜೀವಿತ ಕಾಲದಲ್ಲಿ ಅವರ ಹೆಸರಿಗೆ ಇರುವ ಖಾತೆಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ ಆದರೆ ಊರಿನಲ್ಲಿ ಪಂಚಾಯಿತಿಯಲ್ಲಿ ಪ್ರಶ್ನೆ ಮಾಡುತ್ತಿದ್ದೆವು ಎಂದು ಹೇಳುತ್ತಾರೆ. 1ನೇ ಪ್ರತಿವಾದಿಯ ಗಂಡ ಮೃತಪಟ್ಟ ನಂತರ 1ನೇ ಪ್ರತಿವಾದಿಯ ಅನುಮತಿಯ ಮೇರೆಗೆ 2ನೇ ಪ್ರತಿವಾದಿಯ ಹೆಸರಿಗೆ ಅವರ ತಂದೆಯ ಪಾಲಿಗೆ ಬಂದ ಆಸ್ತಿಗಳು ಖಾತೆಯಾಗಿವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮಗೆ ಗೊತ್ತಿಲ್ಲದಂತೆ ಮೋಸ ಮಾಡಿ ಮಾಡಿದ್ದಾರೆಂದು ಹೇಳುತ್ತಾರೆ. ನಿಡಿ 1 ನ್ನು ನಾವು ಎಲ್ಲಿಯೂ ಸಹ ಪ್ರಶ್ನೆ ಮಾಡಿರುವುದಿಲ್ಲ. **2017** ರಲ್ಲಿ 2ನೇ ಪ್ರತಿವಾದಿಯ ಹೆಸರಿಗೆ ಖಾತೆ ಬಂದ ನಂತರ ಮೊಟ್ಟ ಮೊದಲ ಬಾರಿಗೆ ನಾನು ಎ .ಸಿ. ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತೇನೆಂದರೆ ಸರಿ . ಅದು ಆರ್.ಎ. ನಂ.**677/2017** ಎಂದರೆ ಸರಿ. ದಿ.**13.07.2023** ರಂದು ಅದು ನಮಗೆ ಆದೇಶವಾಯಿತು ಎಂದರೆ ಸರಿ. ಸದರಿ ಆದೇಶದಲ್ಲಿ ವಿಭಾಗಪತ್ರವನ್ನು ಪರಿಶೀಲನೆ ಮಾಡಿ ಖಾತೆ ಮಾಡಬೇಕು ಎಂದು ಆದೇಶವಾಗಿತ್ತು ಎಂದರೆ ನಾನು ಓದಿಲ್ಲ ಹಾಗಾಗಿ ನನಗೆ ಗೊತ್ತಿಲ್ಲ . ವಿಭಾಗಪತ್ರವನ್ನು ತಹಶೀಲ್ದಾರರವರ ಮುಂದೆ ದಿ.**14.09.203** ರಂದು ಹಾಜರುಪಡಿಸಿದ್ದೇನೆ. ಅದರ ನಕಲನ್ನು ಹಾಜರುಪಡಿಸಿದ್ದೇನೆ. ಆದರೆ ಮೂಲದಾಖಲಾತಿಯನ್ನು ತಹಶೀಲ್ದಾರರವರ ಕಚೇರಿಯಲ್ಲಿ ಕೇಳಿಲ್ಲ. ಎ.ಸಿ. ನ್ಯಾಯಾಲಯದ ಆದೇಶವನ್ನು ಪ್ರಶ್ನೆ ಮಾಡಲು ಎರಡು ತಿಂಗಳು ಕಾಲಾವಕಾಶ ಇತ್ತು ಎಂದು ನನಗೆ ಗೊತ್ತಿಲ್ಲ. ಈ ಮಧ್ಯ ಪ್ರತಿವಾದಿಗಳು ಎ.ಸಿ. ನ್ಯಾಯಾಲಯದ ಆದೇಶವನ್ನು ಪ್ರಶ್ನೆ ಮಾಡಿ ಅದಕ್ಕೆ ತಡೆಯಾಜ್ಞೆ ಪಡೆದಿದ್ದಾರೆ ಎಂದರೆ ಸಾಕ್ಷಿಯು ಪಡೆದಿರಬಹುದು ಆದರೆ ನನಗೆ ನೋಟೀಸು ಬಂದಿಲ್ಲ ಎಂದು*

ಹೇಳುತ್ತಾರೆ. ಸದರಿ ಆದೇಶವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ 2 ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿಯ ಗಂಡನ ಪಾಲಿಗೆ ವಿಭಾಗದಲ್ಲಿ ಯಾವ ಯಾವ ಆಸ್ತಿಗಳು ಹೋಗಿವೆ ಎಂದು ನನಗೆ ಗೊತ್ತಿಲ್ಲ.

1995 ರಲ್ಲಿ ಸರ್ವೆ ನಂ.69/2 ರ ಆಸ್ತಿ ನನಗೆ ಖಾತೆಯಾಗಿದೆ. ಸರ್ವೆ ನಂ.2/2 ರ ಆಸ್ತಿಯು ಸಹ 1995 ರಲ್ಲಿ ನನಗೆ ಖಾತೆಯಾಗಿದೆ. ದಾವಾಆಸ್ತಿಯು ನನಗೆ ಇದುವರೆವಿಗೂ ಸಹ ಖಾತೆಯಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನೇ ಸ್ವಾಧೀನದಲ್ಲಿ ಇದ್ದೇನೆಂದು ಹೇಳುತ್ತಾರೆ . ನಿಪಿ 5 ರ ಪ್ರಕಾರ ಆಸ್ತಿಗಳು ಇದುವರೆವಿಗೂ ಸಹ ಖಾತೆಯಾಗಿಲ್ಲ ಎಂದರೆ ಸರಿಯಲ್ಲ. ನಿಪಿ 5 ರ ಪ್ರಕಾರ ಖಾತೆಯಾಗಿವೆ ಎಂದು ತೋರಿಸಲು ಮುಟೇಶನ್ ನ್ನು ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರೆದು ದಾವಾಆಸ್ತಿಯು ಯಾರ ಹೆಸರಿಗೂ ಮುಟೇಶನ್ ಆಗಿಲ್ಲ ಎಂದು ಹೇಳುತ್ತಾರೆ. ನಿಪಿ 3 ರ ಪ್ರಕಾರ ದಾವಾಆಸ್ತಿಯು 2 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೋಸ ಮಾಡಿ ಮಾಡಿಕೊಂಡಿದ್ದಾರೆಂದು ನುಡಿಯುತ್ತಾರೆ . ನಿಪಿ 4 ರಲ್ಲಿಯೂ ಸಹ 2 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಮೋಸ ಮಾಡಿ ಮಾಡಿದ್ದಾರೆಂದು ಹೇಳುತ್ತಾರೆ. ನಿಪಿ 3 ಮತ್ತು 4 ರ ಆಧಾರದ ಮೇಲೆ 2 ನೇ ಪ್ರತಿವಾದಿಯವರು ಬ್ಯಾಂಕಿನಿಂದ ಸಾಲ ಪಡೆದಿದ್ದಾರೆಂದರೆ ಸರಿ. ಸಾಕ್ಷಿ ಮುಂದುವರೆದು ಇ .ಸಿ. ನನ್ನ ಹೆಸರಿನಲ್ಲಿದೆ ಎಂದು ಹೇಳುತ್ತಾರೆ. ನನ್ನ ಹೆಸರಿನಲ್ಲಿ ಇರುವ ಇ .ಸಿ.ಯನ್ನು ಹಾಜರುಪಡಿಸಿರುವುದಿಲ್ಲ. ದಾವಾಆಸ್ತಿಯ ಖಾತೆಯು ಇದುವರೆವಿಗೂ ಸಹ ನನ್ನ ಹೆಸರಿಗೆ ಬಂದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು

*ಯಾರಿಗೂ ಬಂದಿಲ್ಲ ಎಂದು ಹೇಳುತ್ತಾರೆ . ಸಾಕ್ಷಿಗೆ ಒಂದು ಮುಟೇಶನ್ ತೋರಿಸಲಾಗಿ ಅದನ್ನು ನೋಡಿ ಗುರುತಿಸುತ್ತಾರೆ. ಅದನ್ನು ನಿಡಿ **3** ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಅದನ್ನು ಮೋಸ ಮಾಡಿ ಮಾಡಿದ್ದಾರೆಂದು ಹೇಳುತ್ತಾರೆ. ದಾವಾಆಸ್ತಿಯಲ್ಲಿ ಮಾವಿನತೋಟವಿದೆ ಎಂದರೆ ಸರಿ. ಸದರಿ ಮಾವಿನತೋಟದಲ್ಲಿ ಪ್ರತಿವಾದಿಯವರು ಪಸಲನ್ನು ತೆಗೆದುಕೊಳ್ಳುತ್ತಿದ್ದಾರೆಂದರೆ ಸರಿಯಲ್ಲ. ಖಾತೆ ನಂ.**503** ಯಾರಿಗೆ ಸಂಬಂಧಪಟ್ಟಿದೆ ಎಂದು ನನಗೆ ಗೊತ್ತಿಲ್ಲ . ಸದರಿ ಖಾತೆಗೆ ಸಂಬಂಧಪಟ್ಟಂತೆ ನಾನು ಕಂದಾಯ ಕಟ್ಟಿದ್ದೇನೋ ಇಲ್ಲವೂ ನನಗೆ ಗೊತ್ತಿಲ್ಲ. ಖಾತೆ ನಂ.**503** ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಸರ್ವೆ ನಂಬರು ಗೊತ್ತಿಲ್ಲ ಹಾಗಾಗಿ ಅದನ್ನು ಹೇಳಿದರೆ ಹೇಳುತ್ತೇನೆಂದು ಹೇಳುತ್ತಾರೆ . ನಿಪಿ **2** ರ ಕಾಲಕ್ಕೆ ದಾವಾಆಸ್ತಿಯ ಖಾತೆಯು ನನ್ನ ತಂದೆಯ ಹೆಸರಿನಲ್ಲಿತ್ತು. ನಿಪಿ **2** ರ ಕಾಲಕ್ಕೆ ನನ್ನ ಹೆಸರಿಗೆ ಖಾತೆ ಇರಲಿಲ್ಲ ಮತ್ತು ಯಾರ ಹೆಸರಿಗೂ ಖಾತೆ ಇರಲಿಲ್ಲ . ನಿಪಿ **2** ನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿಲಾಗಿದೆ ಎಂದರೆ ಸರಿಯಲ್ಲ.*

*( ಈ ಹಂತದಲ್ಲಿ ಮುಂದುವರೆದು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.)*

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ *ಗ*ಣಕೀಕರಿಸಲಾಯಿತು**).**

ಓದಿ ಹೇಳಿ ಕೇಳಿ ಸರಿಯಾಗಿದೆ**.**

**(**ಮನು *ಬಿ.ಕೆ.***)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ